# ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್
# ಕರೋನಾ ಜಾಗೃತಿ ಅಭಿಯಾನ.

**ಕೋವಿಡ್–19 ಸೋಂಕಿನ ಎರಡನೇ ಅಲೆಯು** ದೇಶದಾದ್ಯಂತ ವ್ಯಾಪಕವಾಗಿ ಹರಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿಯೂ ಸಹ ಸೋಂಕಿತರ ಪ್ರಮಾಣ ತೀವ್ರವಾಗಿ ಏರಿಕೆಯಾಗುತ್ತಿರುವುದರಿಂದ **ಬೆಂಗಳೂರು ಜಿಲ್ಲಾ ಪೊಲೀಸ್ ಹಾಗೂ ಆರ್.ಕೆ ಟ್ರಸ್ಟ್ ಗಾಂಧಿನಗರ ಬೆಂಗಳೂರು** ಇವರ ಸಹಯೋಗದೊಂದಿಗೆ **ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ್ಯಂತ,** ಸಾರ್ವಜನಿಕರಲ್ಲಿ ಮಾಸ್ಕ್ ಧರಿಸುವ, ಸಾಮಾಜಿಕ ಅಂತರ ಕಾಪಾಡುವ, ಸ್ವಯಂ ಶುಚಿತ್ವದ ಬಗ್ಗೆ ಜಾಗೃತಿ ಮೂಡಿಸುವ, ಮತ್ತು **ಉಚಿತವಾಗಿ ಮಾಸ್ಕ್‌ಗಳನ್ನು ವಿತರಣೆ** ಮಾಡುವ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಕೋವಿಡ್–19 ನಿಯಮಾವಳಿ ಉಲ್ಲಂಘಿಸಿದವರ ವಿರುದ್ಧ **ಮಾಸ್ಕ್ ಧರಿಸದ 16241 ಪ್ರಕರಣಗಳು, ಸಾಮಾಜಿಕ ಅಂತರ ಕಾಪಾಡದ 1176 ಪ್ರಕರಣಗಳು, ವಿಪತ್ತು ನಿರ್ವಹಣಾ ಕಾಯ್ದೆ ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ–2020 ಅಡಿಯಲ್ಲಿ 54 ಪ್ರಕರಣಗಳನ್ನು ದಾಖಲಿಸಲಾಗಿದೆ.**

ಕೇವಲ ಪ್ರಕರಣ ದಾಖಲಿಸುವುದಷ್ಟೆ ಅಲ್ಲದೆ **ಸಾರ್ವಜನಿಕವಾಗಿ ಗುಂಪು ಸೇರುವ ಸ್ಥಳಗಳಲ್ಲಿ ಜನ ಜಾಗೃತಿ ಕಾರ್ಖಾನೆಗಳಲ್ಲಿ ಹೆಚ್ಚಿನ ಜನಸಂದಣಿ ಇರುವ ಸ್ಥಳಗಳಲ್ಲಿ ಕಾರ್ಮಿಕರಿಗೆ, ಶಾಲಾ ಕಾಲೇಜುಗಳಲ್ಲಿ ವಿಧ್ಯಾರ್ಥಿಗಳಿಗೆ , ಬಸ್/ಆಟೋ ಚಾಲಕರುಗಳಿಗೆ, ಧಾರ್ಮಿಕ ಸಂಘ ಸಂಸ್ಥೆಗಳಿಗೆ ಜಾಗೃತಿ,** ಮೂಡಿಸಲಾಗುತ್ತಿದ್ದು ಈ ಕಾರ್ಯಕ್ರಮವನ್ನು ಮುಂದೆಯೂ ಸಹ ಮುಂದುವರೆಸಲಾಗುವುದು.

ಪ್ರಸ್ತುತ **ಆರ್.ಕೆ ಟ್ರಸ್ಟ್** ಗಾಂಧಿನಗರ ಬೆಂಗಳೂರು ಇವರ ವತಿಯಿಂದ **Let's mask India** ಎಂಬ ಧ್ಯೇಯ ವಾಕ್ಯದೊಂದಿಗೆ ಕೊವಿಡ್–19 ನಿಯಂತ್ರಣಕ್ಕೆ ಶ್ರಮಿಸಲಾಗುತ್ತಿದೆ.

## ಕರ್ನಾಟಕ ಸರ್ಕಾರದ ಸುತ್ತೋಲೆ

## ಆದೇಶ ಸಂಖ್ಯೆ/ಕಂಇ/158/ಟಿಎನ್ ಆರ್/2020 ದಿ. 16.04.2021

## ಸಾರ್ವಜನಿಕ ಒಗ್ಗೂಡುವಿಕೆಗೆ ನಿಯಂತ್ರಣ ಕ್ರಮಗಳು

- ಸಾಮಾಜಿಕ ಸಮಾರಂಭಗಳು ಮತ್ತು ಆಚರಣೆಗಳು ಭಾರತ ಸರ್ಕಾರದ ಮಾರ್ಗ ಸೂಚಿಯಂತೆ ಪ್ರತಿ 3.25 ಚದರ ಮೀಟರ್‌ಗಳಿಗೆ ಒಬ್ಬ ವ್ಯಕ್ತಿ ಎಂಬ ಮಾನದಂಡ ಕಡ್ಡಾಯ.
- ಮದುವೆ ತರೆದ ಪ್ರದೇಶದಲ್ಲಿದ್ದರೆ 200 ಜನ ಕಲ್ಯಾಣ ಮಂಟಪ ಅಥವ ಮುಚ್ಚಿದ ಪ್ರದೇಶದಲ್ಲಿದ್ದರೆ 100 ಜನರಿಗೆ ಅವಕಾಶ.
- ಜನ್ಮದಿನ ಅಥವ ಇತರೆ ಆಚರಣೆಗಳು ತೆರೆದ ಪ್ರದೇಶದಲ್ಲಿದ್ದರೆ 50 ಜನ ಮುಚ್ಚಿದ ಪ್ರದೇಶದಲ್ಲಿದ್ದರೆ 25 ಜನರಿಗೆ ಅವಕಾಶ.
- ನಿಧನ ಅಥವ ಶವಸಂಸ್ಕಾರ ತೆರೆದ ಪ್ರದೇಶದಲ್ಲಿದ್ದರೆ 50 ಜನ ಮುಚ್ಚಿದ ಪ್ರದೇಶದಲ್ಲಿದ್ದರೆ 25 ಜನರಿಗೆ ಅವಕಾಶ.
- ಅಂತ್ಯ ಕ್ರಿಯೆಗಳು 25 ಜನರಿಗೆ ಮಾತ್ರ ಅವಕಾಶ.
- ಇತರೆ ಸಮಾರಂಭಗಳು 50 ಜನರಿಗೆ ಮೀರುವಂತಿಲ್ಲ.
- **ಧಾರ್ಮಿಕ ಆಚರಣೆಗಳನ್ನು ಸಾರ್ವಜನಿಕವಾಗಿ ಆಚರಣೆ ನಿಷೇಧಿಸಲಾಗಿದೆ.**
- ರಾಜಕೀಯ ಸಮಾರಂಭಗಳು ತೆರೆದ ಪ್ರದೇಶದಲ್ಲಿ ಮಾತ್ರ 200 ಜನರಿಗೆ ಮೀರದಂತೆ ಅವಕಾಶ ನೀಡಲಾಗಿದೆ.

**ಮೇಲ್ಕಂಡ ಆದೇಶ ಪಾಲನೆಯಲಿ ಲೋಪವೆಸಗುವವರ ವಿರುದ್ದ NDMA-2005, IPC, Karnataka Epidamic Disceases Act-2020 ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.**

**ಮಾಸ್ಕ್ ಧರಿಸದ, ಸಾಮಾಜಿಕ ಅಂತರ ಕಾಪಾಡದವರ ವಿರುದ್ದ The Karnataka Epidamic Disceases Regulation-2020 ಅನ್ವಯ ಕ್ರಮ ಕೈಗೊಳ್ಳಲಾಗುವುದು.**

ಮಾಸ್ಕ್ ಧರಿಸಿ– ಕರೋನಾ ನಿಯಂತ್ರಿಸಿ
ಇದ್ದರೆ ಸಾಮಾಜಿಕ ಅಂತರ–ಉತ್ತಮ ಆರೋಗ್ಯ ನಿರಂತರ
ನಿಮ್ಮ ಸುರಕ್ಷೆ ನಿಮ್ಮ ಕೈಯಲ್ಲಿ–ಮನೆಯಲ್ಲೇ ಇರಿ ಸುರಕ್ಷಿತವಾಗಿರಿ.